ಮೀಸಲಾತಿ ಅನ್ವಯ ಹುದ್ದೆಗಳನ್ನು ವರ್ಗೀಕರಿಸಿ ತುಂಬಲು ಅನುಮತಿ ನೀಡಲಾಗುತ್ತಿದೆ. ಬೋಧಕೇತರ ಸಿಬ್ಬಂದಿಗಳ ಸಂಬಂಧಿಸಿದಂತೆ ಆರ್ಥಿಕ ಮಿತವ್ಯಯ ಆದೇಶ ಸಡಿಸಿಲ್ಲ ವಾದ್ದರಿಂದ ಅನುಮತಿ ನೀಡಲಾಗುತ್ತಿಲ್ಲ.

ಆ) ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಬೋಧಕ ಹುದ್ದೆಗಳನ್ನು ಇತ್ತೀಚೆಗೆ ಕರ್ನಾಟಕ ಲೋಕ ಸೇವಾ ಆಯೋಗದಿಂದ ಆಯ್ಕೆಯಾದ ಅಭ್ಯರ್ಥಿಗಳಿಂದ ತುಂಬಲಾಗುತ್ತಿದೆ. ಅಲ್ಲದೇ ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಲು ಸಹ ಕ್ರಮ ಕೈ ಗೊಳ್ಳಲಾಗುತ್ತಿದೆ.

ವಿಷಯ :- ಹುಬ್ಬಳ್ಳಿ ತಾಲ್ಲೂಕಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 752 (1408)

ಶ್ರೀ ಜಗದೀಶ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಆರೋಗ್ಯ ಘಟಕ, ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಸಾಮಾನ್ಯ ಆಸ್ಪತ್ರೆಗಳೆಷ್ಟು?

ಆ) ಸದರಿ ಆಸ್ಪತ್ರೆಗಳಲ್ಲಿ ವೈದ್ಯರ ಮತ್ತು ಸಿಬ್ಬಂಧಿ ವರ್ಗದವರ ಕೊರತೆ ಇದೆಯೇ? ಕೊರತೆ ಇದ್ದಲ್ಲಿ ಭರ್ತಿ ಮಾಡಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಡಾ. ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :-

ಅ) ಹುಬ್ಬಳ್ಳಿ ತಾಲ್ಲೂಕಿನಲ್ಲಿ ಕೆಳಕಂಡಂತೆ ಆರೋಗ್ಯ ಸಂಸ್ಥೆಗಳು ಇರುತ್ತವೆ.

1. ಪ್ರಾ.ಆ.ಘಟಕ - 1
2. ಪ್ರಾ.ಆ. ಕೇಂದ್ರ - 4
3. ಸಾ. ಆಸ್ಪತ್ರೆ - 2

ವಿವರ ಕೆಳಕಂಡಂತಿದೆ.

ಪ್ರಾ.ಆ.ಘಟಕ	ಪ್ರಾ.ಆ.ಕೇಂದ್ರ	ಸಾ. ಆಸ್ಪತ್ರೆ
ಕೋಳಿವಾಡ	ಬೈಹಟ್ಟಿ	ಕೆ.ಎಂ.ಸಿ.
	ಇಂಗಲಹಟ್ಟಿ	ಆಸ್ಪತ್ರೆ, ಹುಬ್ಬಳ್ಳಿ
	ಅರಳಿಕಟ್ಟೆ	79 ಹಾಸಿಗೆಗಳು
	ನೊಲ್ವಿ	ಚಿಟಗುಪ್ಪಿ
		65 ಹಾಸಿಗೆಗಳು

ಒಟ್ಟು 137 ಹುದ್ದೆಗಳು ಕೊರತೆ ಇರುವುದು. ವಿವರಗಳನ್ನು ಪಟ್ಟಿ ಮಾಡಿ ಲಗತ್ತಿಸಿದೆ. ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಲೋಕಸೇವಾ ಆಯೋಗದಿಂದ ಆಯ್ಕೆಯಾದ ಅಭ್ಯರ್ಥಿಗಳಿಂದ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ವೈದ್ಯರುಗಳಿಂದ ತುಂಬಲಾಗುವುದು. ಹಾಗೂ ಸ್ನಾತಕೋತ್ತರ ವ್ಯಾಸಂಗ ಮುಗಿಸಿಕೊಂಡು ಬಂದ ವೈದ್ಯೇತರ ಹುದ್ದೆಗಳನ್ನು ನೇರ ನೇಮಕಾತಿಯಿಂದ ಹಾಗೂ ಪದೋನ್ನತಿಯಿಂದ ತುಂಬಲು ಕ್ರಮ ಕೈಗೊಳ್ಳಲಾಗುತ್ತಿದ್ದು, ಸಧ್ಯದಲ್ಲೇ ಇವುಗಳನ್ನು ತುಂಬಲಾಗುವುದು.

ಹುಬ್ಬಳ್ಳಿ ತಾಲ್ಲೂಕಿನಲ್ಲಿರುವ ಆಸ್ಪತ್ರೆಗಳಲ್ಲಿ ವೈದ್ಯರ ಮತ್ತು ಸಿಬ್ಬಂದಿ ವರ್ಗದವರ ಖಾಲಿ ಹುದ್ದೆ ಮಾಹಿತಿ

ಕ್ರಮ ಸಂಖ್ಯೆ.	ಹುದ್ದೆಗಳ ವಿವರ	ಕೆ.ಎಂ.ಸಿ ಆಸ್ಪತ್ರೆ ಹುಬ್ಬಳ್ಳಿ	ಪ್ರಾ.ಆಕೇಂದ್ರ ಬ್ಯಾಹಟ್ಟಿ	ಪ್ರಾ.ಆಕೇಂದ್ರ ಆರಳಿ ಕಟ್ಟಿ	ಪ್ರಾ.ಆಕೇಂದ್ರ ಇಂಗಲಹಳ್ಳಿ	ಪ್ರಾ. ಘಟಕ ಕೋಳಿವಾಡ	ಸರ್ಕಾರಿ ಆಯುರ್ವೇದ ಆಸ್ಪತ್ರೆ ಮಂಟಾಡ	ಸರ್ಕಾರಿ ಆಯುರ್ವೇದ ಆಸ್ಪತ್ರೆ ರಾಯಾಳ	ಪ್ರಕೃತಿ ಚಿಕಿತ್ಸಾಲಯ	ಸಾರ್ವಜನಿಕ ಆಸ್ಪತ್ರೆ ಚಿಟಗುಪ್ಪಿ	ಒಟ್ಟು ಖಾಲಿ ಹುದ್ದೆಗಳು
1	2	3	4	5	6	7	8	9	10	11	12
1.	ವೈದ್ಯಾಧಿಕಾರಿ									2	2
2.	ವೈದ್ಯಾಧಿಕಾರಿ ದರ್ಜೆ-3						1	1			2
3.	ಸ್ಥಳೀಯ ವೈದ್ಯಾಧಿಕಾರಿ	1									1
4.	ಹಿರಿಯ ಫಾರ್ಮಸಿಸ್ಟ್									1	1
5.	ಕಿರಿಯ ಫಾರ್ಮಸಿಸ್ಟ್	1					1	1	1		4
6.	ಪದವೀದರ ಫಾರ್ಮಸಿಸ್ಟ್	2									2
7.	ಹಿರಿಯ ಆರೋಗ್ಯ ಸಹಾಯಕ		1								1
8.	ಹಿರಿಯ ಪುರುಷ ಆರೋಗ್ಯ ಸಹಾಯಕ			1		1					2
9.	ಕಿರಿಯ ಮಹಿಳಾ ಆರೋಗ್ಯ ಸಹಾಯಕಿ		2								2

1	2	3	4	5	6	7	8	9	10	11	12
10.	ಪ್ರ. ದ. ಸಹಾಯಕ	1									1
11.	ದ್ವಿ. ದ. ಸಹಾಯಕ	1									1
12.	ಫಿಜಿಸ್ಟ್	1									1
13.	ಪ್ರಾಂಶುಪಾಲರು ಶುಶ್ರೂಷ ತರಬೇತಿ ಶಾಲೆ	1									1
14.	ಸೈಟೋ ಟೆಕ್ನಾಲಜಿಸ್ಟ್	2									2
15.	ಹಿರಿಯ ಬೆರಳಚ್ಚುಗಾರರು	1									1
16.	ಕಿ. ಪ್ರ. ಶಾಲ ತಂತ್ರಜ್ಞ	1	1								2
17.	ರೇಡಿಯೋ ಗ್ರಾಫರ್	2									2
18.	ಲಿಫ್ಟ್ ಮೆಕಾನಿಕ್	1									1
19.	ಶುಶ್ರೂಷ ಅಧೀಕ್ಷಕರು ದರ್ಜೆ-2	2									2
20.	ಹಿರಿಯ ಶುಶ್ರೂಷಕರು	5									5
21.	ಶುಶ್ರೂಷಕರ ಅಧೀಕ್ಷಕರು ದರ್ಜೆ-1	1									1
22.	ಶುಶ್ರೂಷಕಿ									1	1
23.	ವಾಹನ ಚಾಲಕರು	1	1		1						3
24.	ಗ್ರೂಪ್-ಡಿ	89			2	1			1	3	96
	ಒಟ್ಟು	113	5	1	3	2	2	2	2	7	137